## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ

## ಎಂವಿಸಿ ಸಂಖ್ಯೆಃ 118/2019

RW-2

ದಿನಾಂಕ **19.08.2022** ರಂದು ಈ ಸಾಕ್ಷಿದಾರರು ಹಾಜರಾಗಿ ತಮ್ಮ ಮುಖ್ಯವಿಚಾರಣೆಗೆ ಬದಲಾಗಿ ತಮ್ಮ ಸಾಕ್ಷಿ ಪ್ರಮಾಣಪತ್ರವನ್ನು ಹಾಕುವುದಾಗಿ ನುಡಿದಿದ್ದಾರೆ. ನಂತರ ಈ ಸಾಕ್ಷಿದಾರರನ್ನು ಸಾಕ್ಷಿ ಕಟಕಟೆಗೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ನಂತರ ಸಾಕ್ಷಿದಾರರು ತಮ್ಮ ಸಾಕ್ಷಿ ಪ್ರಮಾಣಪತ್ರವನ್ನು ಕೊಟ್ಟಿದ್ದಾರೆ ಮತ್ತು ಈ ಕೆಳಕಂಡಂತೆ ನುಡಿದಿದ್ದಾರೆ.

ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ನಮ್ಮ ವಕೀಲರ ಮೂಲಕ ನಾನೇ ಬರೆಸಿದ್ದೇನೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿಯನ್ನು ಹಾಕಿದ್ದೇನೆ.

ದಾಖಲೆಗಳನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯವಿಚಾರಣೆ ಮಾಡಲು ಮಾನ್ಯ ವಕೀಲರು ಅನುಮತಿ ಕೇಳಿದ್ದಾರೆ, ಅನುಮತಿ ನೀಡಿದೆ.

**<u>ಮುಂದುವರೆದ ಮುಖ್ಯವಿಚಾರಣೆ 2 ನೇ ಎದುರುದಾರರ ಪರವಾಗಿ ಶ್ರೀ ಕೆ.ಡಿ.ಡಿ, ವಕೀಲರಿಂದಃ</u>**

1. ಅಧಿಕಾರಪತ್ರವನ್ನು ಹಾಜರು ಮಾಡಿದ್ದು ಅದನ್ನು **ನಿಆರ್-3** ಎಂದು ಮತ್ತು ವಿಮಾ ಪಾಲಿಸಿಯನ್ನು **ನಿಆರ್-4** ಎಂದು ಗುರುತಿಸಿದೆ. ನಮ್ಮ ವಿಮಾ ಕಂಪನಿಯ ಪರವಾಗಿ ನಾವು ನೇಮಿಸಿಕೊಂಡಿರುವ ತನಿಖಾ ತಂಡದವರು ನೀಡಿರುವ ವರದಿಯನ್ನು **ನಿಆರ್-5** ಎಂದು ಗುರುತಿಸಿದೆ.

<u>ಸೂಚನೆಃ</u> ನಿಆರ್-5 ಎಂದು ಗುರುತು ಆಗಿರುವ ದಾಖಲೆಯು ಒಟ್ಟು 10 ಹಾಳೆಗಳನ್ನು ಒಳಗೊಂಡಿದೆ.

2. ಚಾಲನಾ ಪರವಾನಗಿಯ ನಕಲನ್ನು **ನಿಆರ್-6** ಎಂದು ಗುರುತಿಸಿದೆ.

3. Truth lab ನವರು ನೀಡಿರುವ ಒಂದು ವರದಿಯು ಮುಚ್ಚಿದ ಲಕೋಟೆಯಲ್ಲಿ ಇದೆ. ಈ ದಾಖಲೆಯನ್ನು ನಿಶಾನೆಯನ್ನಾಗಿ ಗುರುತಿಸಬೇಕು ಎಂಬುದಾಗಿ 2 ನೇ ಎದುರುದಾರರ ಪರ ವಕೀಲರು ಪ್ರಾರ್ಥಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಅರ್ಜಿದಾರರ ಪರ

ವಕೀಲರಾದ ಶ್ರೀ ಕೆ.ಎಸ್.ಆರ್ ರವರು ಈ ದಾಖಲೆಯನ್ನು ಗುರುತಿಸಲು ತಮ್ಮ ತಕರಾರು ಇದೆ ಎಂದು ನುಡಿದಿದ್ದಾರೆ ಮತ್ತು ಈ ದಾಖಲೆಯನ್ನು ಪರೀಕ್ಷೆಗೆ ಕಳುಹಿಸಲು 2 ನೇ ಎದುರುದಾರರಿಗೆ ಅಧಿಕಾರವನ್ನು ಯಾರು ಕೊಟ್ಟಿದ್ದಾರೆ ಮತ್ತು ಈ ನ್ಯಾಯಾಲಯವು ಯಾವುದೇ ಅನುಮತಿಯನ್ನು ಕೊಟ್ಟಿರುವುದಿಲ್ಲ ಮತ್ತು ಆ ಕಾರಣದಿಂದ ಈ ದಾಖಲೆಯನ್ನು ಗುರುತಿಸಲು ಸಾಧ್ಯವಿಲ್ಲ ಎಂಬ ತಕರಾರನ್ನು ಮಾಡಿದ್ದಾರೆ. ಇದರ ಜೊತೆಗೆ ಶ್ರೀ ಕೆ.ಎಸ್.ಆರ್ ರವರು ಪೊಲೀಸ್ ನವರು ಮಾತ್ರ ಒಂದು ಪ್ರಕರಣದ ತನಿಖೆಯನ್ನು ಮಾಡಲು ಅಧಿಕಾರ ವುಳ್ಳವರು ಆಗಿರುತ್ತಾರೆ ಮತ್ತು ಸಂಬಂಧಪಟ್ಟ ನ್ಯಾಯಾಲಯದ ಅನುಮತಿ ಇಲ್ಲದೆ ಹೊರಗಿನ ವ್ಯಕ್ತಿಗಳು ತನಿಖೆಯನ್ನು ಮಾಡಲು ಕಾನೂನಿನಲ್ಲಿ ಅವಕಾಶ ಇಲ್ಲ ಮತ್ತು ಆ ಕಾರಣದಿಂದ ಈ ದಾಖಲೆಯನ್ನು ನಿಶಾನೆಯನ್ನಾಗಿ ಗುರುತಿಸಲು ಬರುವುದಿಲ್ಲ ಎಂಬುದಾಗಿ ತಕರಾರು ಮಾಡಿದ್ದಾರೆ.

4. ಎರಡೂ ಕಡೆಯ ವಾದಗಳನ್ನು ಆಲಿಸಿದ ನಂತರ ನ್ಯಾಯಾಲಯವು ಈ ಸಾಕ್ಷಿದಾರರಿಗೆ "ಈ Truth lab ನವರು ಕಳುಹಿಸಿರುವ ಮುಚ್ಚಿದ ಲಕೋಟೆಯಲ್ಲಿ ಏನು ಇದೆ" ಎಂಬ ಪ್ರಶ್ನೆಯನ್ನು ಹಾಕಲಾಗಿ ಅದಕ್ಕೆ ಪ್ರತಿಯಾಗಿ ಸಾಕ್ಷಿದಾರರು "ಈ ಪ್ರಕರಣದಲ್ಲಿ ಸಾಕ್ಷಿದಾರರಾಗಿ ತೋರಿಸಿರುವ ವ್ಯಕ್ತಿಗಳನ್ನು ನಾವು ನಮ್ಮ ತನಿಖಾ ಸಂಸ್ಥೆಯ ಮೂಲಕ ವಿಚಾರಣೆ ಮಾಡಿದ್ದೇವೆ ಮತ್ತು ಆ ವಿಚಾರಣೆಯನ್ನು ವಿಡಿಯೋ recording ಮಾಡಿಕೊಂಡಿದ್ದೇವೆ ಮತ್ತು ಆ ವಿಡಿಯೋ recording ಅನ್ನು Truth lab ರವರಿಗೆ ಕಳುಹಿಸಿ ಆ ವಿಡಿಯೋ recording ನಲ್ಲಿ ಯಾವುದೇ manipulations ಗಳು ಇರುವುದಿಲ್ಲ ಎಂಬುದಾಗಿ ಖಾತರಿ ಮಾಡುವ ಉದ್ದೇಶದಿಂದ Truth lab ನವರಿಗೆ ಆ ದಾಖಲೆಗಳನ್ನು ಮತ್ತು ವಿಡಿಯೋ recording ಗಳ compact disc ಗಳನ್ನು ಕಳುಹಿಸಲಾಗಿತ್ತು ಮತ್ತು ಅದನ್ನು Truth lab ನವರು ವೈಜ್ಞಾನಿಕ ಪರೀಕ್ಷೆಗೊಳಪಡಿಸಿ ತಮ್ಮ ವರದಿಯನ್ನು ಸಲ್ಲಿಸಿದ್ದಾರೆ ಮತ್ತು ಆ ವರದಿಯು ಮುಚ್ಚಿದ ಲಕೋಟೆಯಲ್ಲಿ ಇದೆ" ಎಂದು ಉತ್ತರಿಸಿದ್ದಾರೆ.

5. ಎರಡೂ ಕಡೆಯ ವಾದಗಳನ್ನು ಆಲಿಸಿದ ನಂತರ ನ್ಯಾಯಾಲಯವು ಈ ಕೆಳಕಂಡ ಅಭಿಪ್ರಾಯಕ್ಕೆ ಬಂದಿದೆ.

6. ILR 2002 ಕರ್ನಾಟಕ ಪುಟಸಂಖ್ಯೆ 3613 ಆಂಜನೇಯ ಶೆಟ್ಟಿ ವಿರುದ್ಧ ರಂಗಯ್ಯ ಶೆಟ್ಟಿ ಎಂಬ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಯಾವುದೇ ಒಂದು ದಾಖಲೆಯನ್ನು ನಿಶಾನೆಯನ್ನಾಗಿ ಗುರುತಿಸುವ ಸಮಯದಲ್ಲಿ ಒಬ್ಬ ವಕೀಲರು ಆ ದಾಖಲೆಯನ್ನು ನಿಶಾನೆಯನ್ನಾಗಿ ಗುರುತಿಸಲು ಸಾಧ್ಯವಿಲ್ಲ ಎಂಬುದಾಗಿ ತಕರಾರನ್ನು

ಮಾಡಿದರೆ ಮತ್ತು ಆ ತಕರಾರು ಮುದ್ರಾಂಕ ಶುಲ್ಕಕ್ಕೆ (stamp duty) ಸಂಬಂಧಪಟ್ಟಿದ್ದು ಆದರೆ ನ್ಯಾಯಾಲಯವು ಆಗಿಂದಾಗಲೇ ಆ ವಿಷಯದ ಬಗ್ಗೆ ತೀರ್ಮಾನವನ್ನು ನೀಡಬೇಕು ಮತ್ತು ಬೇರೆ ಯಾವುದೇ ವಿಷಯಗಳ ಬಗ್ಗೆ ತಕರಾರುಗಳು ಇದ್ದರೂ ಸಹಾ ಆ ತಕರಾರುಗಳನ್ನು ಆ ಸಾಕ್ಷಿದಾರರ ಹೇಳಿಕೆಯಲ್ಲಿಯೇ ನಮೂದು ಮಾಡಿಕೊಂಡು ಆ ತಕರಾರುಗಳಿಗೆ ಒಳಪಟ್ಟು ದಾಖಲೆಯನ್ನು ನಿಶಾನೆಯನ್ನಾಗಿ ಗುರುತಿಸಬೇಕು ಮತ್ತು ಅಂತಿಮ ತೀರ್ಪು ಬರೆಯುವ ಸಮಯದಲ್ಲಿ ಆ ತಕರಾರುಗಳ ಬಗ್ಗೆ ತನ್ನ ನಿಲುವನ್ನು ನ್ಯಾಯಾಲಯವು ವ್ಯಕ್ತಪಡಿಸಬೇಕು ಎಂಬುದಾಗಿ ಕಾನೂನಿನ ಅಂಶವನ್ನು ವಿಷದೀಕರಿಸಿದೆ.

7. ಮೇಲೆ ವಿಷದೀಕರಿಸಿದ ಕಾನೂನಿನ ಅಂಶದಂತೆ ಈ Truth lab ನಿಂದ ಬಂದಿರುವ ಮುಚ್ಚಿದ ಲಕೋಟೆಯನ್ನು ಮಾನ್ಯ ಅರ್ಜಿದಾರರ ಪರ ವಕೀಲರ ಮೇಲೆ ಹೇಳಿದ ಎಲ್ಲಾ ತಕರಾರಿಗೆ ಒಳಪಟ್ಟು ನಿಶಾನೆಯನ್ನಾಗಿ ಗುರುತಿಸುವುದು ಸೂಕ್ತ ಮತ್ತು ಅಂತಿಮ ತೀರ್ಪು ಬರೆಯುವ ಸಮಯದಲ್ಲಿ ಆ ಬಗ್ಗೆ ನಿಲುವನ್ನು ಹೇಳುವುದು ಸೂಕ್ತ ಎಂಬ ಅಭಿಪ್ರಾಯಕ್ಕೆ ನ್ಯಾಯಾಲಯ ಬಂದಿದೆ. ಆದಕಾರಣದಿಂದ ಅರ್ಜಿದಾರರ ಪರ ವಕೀಲರಾದ ಶ್ರೀ ಕೆಎಸ್ ಆರ್ ರವರು ಮೇಲೆ ಮಾಡಿದ ತಕರಾರುಗಳಿಗೆ ಒಳಪಟ್ಟು ಈ ಮುಚ್ಚಿದ ಲಕೋಟೆಯನ್ನು **ನಿಆರ್-7** ಎಂದು ಗುರುತಿಸಿದೆ.

<u>ಸೂಚನೆಃ</u> ಈ ಮುಚ್ಚಿದ ಲಕೋಟೆಯನ್ನು ಅಂತಿಮ ತೀರ್ಪು ಮಾಡುವ ಸಮಯದಲ್ಲಿ ತೆರೆಯಲಾಗುವುದು. ಒಂದು ವೇಳೆ 2 ನೇ ಎದುರುದಾರರು Truth lab ಸಂಸ್ಥೆಯ ಅಧಿಕಾರಿಗಳನ್ನು ವಿಚಾರಣೆ ಮಾಡಿದರೆ ಅಂತಹ ಸಮಯದಲ್ಲಿ ಈ ಮುಚ್ಚಿದ ಲಕೋಟೆಯನ್ನು ತೆರೆಯಲಾಗುವುದು.

**<u>ಪಾಟೀಸವಾಲು- ಅರ್ಜಿದಾರರ ಪರವಾಗಿ ಶ್ರೀ ಕೆ.ಎಸ್.ಆರ್, ವಕೀಲರಿಂದಃ</u>**

ಮಾನ್ಯ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲನ್ನು ಮುಂದೂಡಿದೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ

**ಸಾಕ್ಷಿಯನ್ನು ದಿನಾಂಕ 16.09.2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ 2 ನೇ ಎದುರುದಾರರ ಪರವಾಗಿ ಶ್ರೀ ಕೆ.ಡಿ.ಡಿ. ವಕೀಲರಿಂದಃ**

8. ನಮ್ಮ ಸಂಸ್ಥೆಯಿಂದ ಸರಕು ಸಾಗಾಣಿಕೆ ವಾಹನಗಳಿಗೆ ನೀಡುವಂತಹ ಪ್ಯಾಕೇಜ್ ಪಾಲಿಸಿಗಳಲ್ಲಿ ಯಾವ ಯಾವ ನಿಬಂಧನೆಗಳನ್ನು (Terms and conditions) ಹಾಕಲಾಗುತ್ತದೆ ಎನ್ನುವ ಬಗ್ಗೆ ಇರುವ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಯನ್ನು **ನಿಆರ್-12** ಎಂದು ಗುರುತಿಸಿದೆ. ಮೈಸೂರಿನ ಪೊಲೀಸ್ ವರಿಷ್ಟಾಧಿಕಾರಿಗಳಿಗೆ ನೀಡಿರುವ ಒಂದು ನೋಟಿಸಿನ ಕಛೇರಿ ನಕಲನ್ನು **ನಿಆರ್-13** ಎಂದು ಮತ್ತು ಅಂಚೆ ರಶೀದಿಯನ್ನು **ನಿಆರ್-14** ಎಂದು ಮತ್ತು ಅಂಚೆ ಸ್ವೀಕೃತಿ ಪತ್ರವನ್ನು **ನಿಆರ್-15** ಎಂದು ಗುರುತಿಸಿದೆ.

**ಪಾಟೀಸವಾಲು- 1 ನೇ ಎದುರುದಾರರ ಪರವಾಗಿ ಶ್ರೀ ಬಿ.ಎಸ್.ಆರ್. ವಕೀಲರಿಂದಃ**

**ಮಾನ್ಯ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ